# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1053 |
| 2 | ಸದಸ್ಯರ ಹೆಸರು | ಶ್ರೀ ಆಯನೂರು ಮಂಜುನಾಥ್ (ಪದವೀಧರರ ಕ್ಷೇತ್ರ) |
| 3 | ಉತ್ತರಿಸುವ ದಿನಾಂಕ | 19.12.2018 |
| 4 | ಉತ್ತರಿಸುವ ಸಚಿವರು | ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಜಾತಿ ದೃಡೀಕರಣ ಪತ್ರ ನೀಡಲು ಎಷ್ಟು ಕಾಲಾವಕಾಶ ನೀಡಲಾಗುವುದು; ಶಾಲೆಗಳಿಗೆ ಜಾತಿ ಪ್ರಮಾಣ ಪತ್ರ ರವಾನಿಸುವ ಸರ್ಕಾರದ ಯೋಜನೆ ಯಾವ ಹಂತದಲ್ಲಿದೆ; (ವಿವರ ಒದಗಿಸುವುದು) | ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ರಾಜ್ಯದ ನಾಗರೀಕರು ಹಾಗೂ ವಿದ್ಯಾರ್ಥಿಗಳು ಜಾತಿ ದೃಢೀಕರಣ ಪತ್ರಗಳಿಗಾಗಿ ಸಲ್ಲಿಸುವ ಅರ್ಜಿಗಳನ್ನು ಸಕಾಲ ಯೋಜನೆಯಲ್ಲಿ ನಿಗದಿಪಡಿಸಿದಂತೆ 21 ದಿವಸಗಳೊಳಗೆ ನೀಡಲು ಕಾಲಾವಕಾಶವಿರುತ್ತದೆ.<br>ಶೈಕ್ಷಣಿಕ ಉದ್ದೇಶಗಳಿಗಾಗಿ ವಿದ್ಯಾರ್ಥಿಗಳು ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಪಡೆಯುವ ಪದ್ಧತಿಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 35 ಮಾಹಿತಿ 2014; ದಿನಾಂಕ: 03.02.2014 ಹಾಗೂ ಸುತ್ತೋಲೆ ಸಂಖ್ಯೆ:ಕಂಇ/ಎಜೆಎಸ್‌ಕೆ/ಆಡಳಿತ-156/12-13; ದಿನಾಂಕ: 06.02.2014 ರಲ್ಲಿ ಸರಳೀಕರಿಸಲಾಗಿದ್ದು, ಸದರಿ ಸುತ್ತೋಲೆಯನ್ವಯ, ರಾಜ್ಯದ ಒಟ್ಟು 14873275 ವಿದ್ಯಾರ್ಥಿಗಳು ಶಾಲಾ ಮುಖೇನವೇ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪಡೆದಿರುತ್ತಾರೆ. (ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ) |
| (ಆ) | ರಾಜ್ಯದಲ್ಲಿ ಜಾತಿ ಪ್ರಮಾಣ ಪತ್ರ ನೀಡುವ ಕುರಿತು ಪ್ರಸ್ತುತ ಅನುಸರಿಸುತ್ತಿರುವ ಅರ್ಹತಾ ನಿಯಮಗಳೇನು? ಜಾತಿ ಪ್ರಮಾಣ ಪತ್ರ ಹೊಸದಾಗಿ ಪಡೆಯುವುದು ಕಡ್ಡಾಯವೇ; ಇದು 5 ವರ್ಷಕ್ಕೆ ಸೀಮಿತವೆ; (ವಿವರ ಒದಗಿಸುವುದು) | ನಾಗರೀಕರು ಹಾಗೂ ವಿದ್ಯಾರ್ಥಿಗಳು ಜಾತಿ ಪ್ರಮಾಣ ಪತ್ರ ಕೋರಿ ಪಡಿತರ ಚೀಟಿ ಅಥವಾ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ಮತ್ತು ಶಾಲಾ ವರ್ಗಾವಣೆ ಪ್ರಮಾಣ ಪತ್ರ ದಾಖಲೆಗಳೊಂದಿಗೆ, ನಿಗದಿತ ಅರ್ಜಿ ಶುಲ್ಕವನ್ನು ಪಾವತಿಸಿ, ಸಲ್ಲಿಸುವ ಅರ್ಜಿಯನ್ನು ನಿಯಮಾನುಸಾರ ಗ್ರಾಮಲೆಕ್ಕಿಗರ ಮೂಲಕ ಕ್ಷೇತ್ರ ಪರಿಶೀಲನೆಗೊಳಪಡಿಸಿ, ಕಂದಾಯ ನಿರೀಕ್ಷಕರ ವರದಿಯ ಮೇರೆಗೆ, ತಹಶೀಲ್ದಾರರು ವಿದ್ಯುನ್ಮಾನ ವ್ಯವಸ್ಥೆಯಲ್ಲಿ ಅನುಮೋದಿಸುವ ಜಾತಿ ಪ್ರಮಾಣ ಪತ್ರವನ್ನು ನಾಡಕಛೇರಿ ತಂತ್ರಾಂಶದ ಮೂಲಕ ವಿತರಿಸಲಾಗುವುದು.<br>ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ ಸುತ್ತೋಲೆ ಸಂಖ್ಯೆ: ಸಕಇ 155 ಬಿಸಿಎ 2012; ದಿನಾಂಕ: 22.02.2012 ರನ್ವಯ, ಜಾತಿ ಪ್ರಮಾಣ ಪತ್ರದ ಕಾಲಾವಧಿಯು ಪ್ರಮಾಣ ಪತ್ರವನ್ನು ರದ್ದುಪಡಿಸುವವರೆಗೆ ಸಿಂಧುತ್ವದಲ್ಲಿರುವುದರಿಂದ, ಹೊಸದಾಗಿ ಜಾತಿ ಪ್ರಮಾಣ ಪತ್ರವನ್ನು ಪಡೆಯುವುದು ಕಡ್ಡಾಯವಿರುವುದಿಲ್ಲ. |

| | | |
|---|---|---|
| (ಇ) | ಸದರಿ ದೃಢೀಕರಣ ಪತ್ರ ನೀಡಿಕೆಯಲ್ಲಿನ ವಿಳಂಬ ಮತ್ತಿತರ ಲೋಪದೋಷಗಳನ್ನು ನಿವಾರಿಸಲು ಕಾನೂನು ಬದ್ಧ ಹಾಗೂ ಶಾಶ್ವತವಾಗಿ ದಾಖಲೆಗಳನ್ನು ಹೊಂದಲು ಸುಧಾರಣೆಗಳನ್ನು ತರಲು ಸರ್ಕಾರ ಕೈಗೊಂಡ ಕ್ರಮಗಳೇನು; | ನಾಗರೀಕರು ಜಾತಿ ಪ್ರಮಾಣ ಪತ್ರವನ್ನು ಪಡೆಯುವಲ್ಲಿ ಉಂಟಾಗುವ ವಿಳಂಬ ಮತ್ತಿತರ ಲೋಪದೋಷಗಳನ್ನು ನಿವಾರಿಸುವ ದೃಷ್ಟಿಯಿಂದ, ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ, ಪ್ರಮಾಣ ಪತ್ರಗಳನ್ನು ಪಡೆಯುವ ಅವಕಾಶವನ್ನು ಕಲ್ಪಿಸಲಾಗಿದೆ.<br>ಇದಲ್ಲದೇ, ಪಡಿತರ ಚೀಟಿಯನ್ನು ಹೊಂದಿರುವ ನಾಗರೀಕರ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ನಾಡಕಛೇರಿ ದತ್ತಾಂಶದಲ್ಲಿ ಸಂಗ್ರಹಿಸಿಟ್ಟುಕೊಂಡಿರುವುದರಿಂದ, ಅರ್ಜಿದಾರರು ಸದರಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ ಕೂಡಲೇ ಹೆಸರು ಮತ್ತು ಪಡಿತರ ಚೀಟಿ ಸಂಖ್ಯೆಯ ಮೇಲೆ ಪರಿಶೀಲಿಸಿ, ಕೂಡಲೇ "e-ಕ್ಷಣ" ಯೋಜನೆಯ ಮೂಲಕ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ಪಡೆಯುವ ಅವಕಾಶವನ್ನು ಸಹಾ ಕಲ್ಪಿಸಲಾಗಿದ್ದು, ಅದರಂತೆ, ನಾಗರೀಕರು ಜಾತಿ ಪ್ರಮಾಣ ಪತ್ರಗಳನ್ನು ವಿಳಂಬವಿಲ್ಲದೇ ಪಡೆಯಲು ಅನುಕೂಲವಾಗಿದೆ. |
| ಈ | ಕೇಂದ್ರ ಸರ್ಕಾರದ ಅನುಮೋದನೆ ಗೊಂಡಿರುವ ಪರಿಶಿಷ್ಟ ಜಾತಿ ಪಟ್ಟಿಯ ಕ್ರ.ಸಂ.23ಕ್ಕೆ ಬೋವಿ,ಭೋವಿ (Non bestha), ಕಲ್ಲು ವಡ್ಡ, ಮಣ್ಣು ವಡ್ಡ ಜಾತಿಗಳನ್ನು ಸೇರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು) | • The Constitution (Scheduled Caste) Order, 1950 ರ ಕ್ರಮ ಸಂಖ್ಯೆ : 4 ರಲ್ಲಿ **Bhovi** ಸೇರಿಸಲಾಗಿದೆ.<br>• ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ : BC 12016/37/76-SCT-V, New Delhi, Dated : 05-10-1979 ರಲ್ಲಿ ಈ ಕೆಳಕಂಡಂತೆ ನಮೂದಿಸಲಾಗಿದೆ.<br><table><tr><th>Sl. No. in SC/ST Schedule</th><th>Name of the Community as given in the SC/ST Schedule</th><th>equallent names or names of Synonyms sub Caste / Tribes.</th></tr><tr><td>23</td><td>Bhovi</td><td>Od<br>Odde<br>Vaddar<br>Waddar<br>Voddar<br>Woddar</td></tr></table><br>• The Constitution (Scheduled Caste) Order (II amendment) 2002ರಲ್ಲಿ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ನಮೂದಿಸಲಾಗಿದೆ.<br>**"23. Bhovi, Od, Odde, Vaddar, Waddar, Voddar, Woddar"**<br>• The Constitution (Scheduled Caste) Order (amendment) 2015ರಲ್ಲಿ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡಂತೆ ನಮೂದಿಸಲಾಗಿದೆ.<br>**"23. Bhovi, Od, Odde, Vaddar, Waddar, Voddar, Woddar, Bovi (Non – Bestha), Kalluvaddar, Mannu Vaddar."** |

| | | |
|---|---|---|
| (ಉ) | ಕಲ್ಲುವಡ್ಡ, ಮಣ್ಣುವಡ್ಡ, ತುಡುಗುವಡ್ಡ, ಬಂಡಿಬಡ್ಡ, ಗಿರಣಿಮೊಡ್ಡ, ಊರುಮೊಡ, ಉಪ್ಪಮೊಡ, ಜಾತಿಗಳು ಪರಿಶಿಷ್ಟ ಜಾತಿಗೆ ಸೇರಿವೆಯೇ? (ಪೂರ್ಣ ವಿವರ ಒದಗಿಸುವುದು) | ಕೇಂದ್ರ ಸರ್ಕಾರದ ಅಧಿಸೂಚನೆಯಂತೆ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ, ಪರಿಶಿಷ್ಟ ಜಾತಿ ಪಟ್ಟಿಯ ಕ್ರಮ ಸಂಖ್ಯೆ:23 ರಲ್ಲಿ ಈ ಕೆಳಕಂಡ ಜಾತಿಗಳನ್ನು ನಮೂದಿಸಲಾಗಿದೆ. **Bhovi, Od, Odde, Vaddar, Waddar, Voddar, Woddar, Bovi (Non - Bestha), Kalluvaddar, Mannu Vaddar.**<br><br>ಉಳಿದಂತೆ, ತುಡುಗವಡ್ಡ, ಬಂಡಿಮೊಡ್ಡ, ಗಿರಣಿಮೊಡ್ಡ, ಊರುಮೊಡ, ಉಪ್ಪಮೊಡ ಜಾತಿಗಳು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಇರುವುದಿಲ್ಲ. |

ಕಂಇ 98 ಎಜಿಎಸ್ 2018

**(ಆರ್.ವಿ. ದೇಶಪಾಂಡೆ)**
ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು